ಅಧ್ಯಾಯ - 35

# ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್
# (National Bank for Agriculture and Rural Development - NABARD)

**ಚರ್ಚಿಸಲಾಗಿರುವ ವಿಷಯಗಳು**

- ಪೀಠಿಕೆ
- ನಬಾರ್ಡ್‌ನ ಪ್ರಾಮುಖ್ಯ
- ಸಂಪನ್ಮೂಲಗಳು
- ನಬಾರ್ಡ್‌ನ ಕಾರ್ಯಗಳು
- ನಬಾರ್ಡ್‌ನ ನವಪ್ರವರ್ತನೆಗಳು
  1. ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ
  2. ಕೃಷಿ ಪತ್ತಿನ ಸಹಕಾರ ಸಂಘಗಳ ಪುನಶ್ಚೇತನ
  3. ಸ್ವಸಹಾಯ ಗುಂಪುಗಳಿಗೆ ಬೆಂಬಲ ಮತ್ತು ಪುನರ್ಧನ ಸೌಲಭ್ಯ
  4. ರೈತ ಕೂಟಗಳ ಸ್ಥಾಪನೆ
  5. ಗ್ರಾಮೀಣ ಮೂಲಸೌಲಭ್ಯ ಅಭಿವೃದ್ಧಿ ನಿಧಿ
  6. ಜಂಟಿ ಬಾಧ್ಯತಾ ಗುಂಪುಗಳು
  7. ವಿವಿಧೋದ್ದೇಶ ಸೇವಾ ಸಹಕಾರಿ
  8. ರೈತರ ಉತ್ಪನ್ನ ಸಂಘ
  9. ಬೇಸಾಯ ವಲಯ ಅಭಿವೃದ್ಧಿ ನಿಧಿ
  10. ದೀರ್ಘಾವಧಿ ನೀರಾವರಿ ನಿಧಿ

**ಪೀಠಿಕೆ**

ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಯ ಬ್ಯಾಂಕನ್ನು ಜುಲೈ 12, 1982ರಂದು ಸ್ಥಾಪಿಸಲಾಯಿತು. ಇದು ಭಾರತದಲ್ಲಿ ಕೃಷಿ ಹಣಕಾಸಿನ ಅಗ್ರ ಸಂಸ್ಥೆಯಾಗಿದೆ. 1979ರ ಡಿಸೆಂಬರಿನಲ್ಲಿ ತನ್ನ ವರದಿಯನ್ನು ಸಲ್ಲಿಸಿದ ಡಾ. ಬಿ. ಶಿವರಾಮನ್ ಅವರ ನೇತೃತ್ವದ 'ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಗಾಗಿ ಸಾಂಸ್ಥಿಕ ಪತ್ತಿನ ಹಣಕಾಸು ವ್ಯವಸ್ಥೆಯ ಪುನರ್ ಪರಿಶೀಲನಾ ಸಮಿತಿಯ' (Committee for Reviewing Arrange-ment for Financing Institutional Credit for Agriculture and Rural Development-CRAFICARD) ಶಿಫಾರಸ್ಸಿನ ಮೇರೆಗೆ ಈ ಸಂಸ್ಥೆಯನ್ನು ಸ್ಥಾಪಿಸಲಾಗಿದೆ. ಇದು ಭಾರತದ ರಿಜರ್ವ್ ಬ್ಯಾಂಕಿನ ಅಂಗಸಂಸ್ಥೆಯಾಗಿ ಕೆಲಸ ಮಾಡುತ್ತದೆ. ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಯ ಹಣಕಾಸಿನ ಪೂರೈಕೆಗೆ ಸಂಬಂಧಿಸಿದಂತೆ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ನಿಗಮದ ಮತ್ತು ಭಾರತದ ರಿಜರ್ವ್ ಬ್ಯಾಂಕಿನ ಪುನರ್ಧನ ಕಾರ್ಯಗಳನ್ನು ಇದಕ್ಕೆ ವಹಿಸಲಾಗಿದೆ.

## ನಬಾರ್ಡ್‌ನ ಪ್ರಾಮುಖ್ಯ
## (Importance of NABARD)

**1. ಪುನರ್ಧನ ಸಂಸ್ಥೆ (Refinancing Agency):** ಕೃಷಿಯ ಪತ್ತಿಗೆ ಸಂಬಂಧಿಸಿದಂತೆ ಇಡೀ ದೇಶದಲ್ಲಿ ಇದು ಏಕೈಕ ಪುನರ್ಧನ ಅಥವಾ ಮರು ಹಣಕಾಸಿನ ಸಂಸ್ಥೆ (Refinancing Agency) ಯಾಗಿರುತ್ತದೆ.

**2. ಹಣಕಾಸಿನ ಸಂಪನ್ಮೂಲಗಳ ಪೂರೈಕೆ (Supply of Financial Resources) :** ಭಾರತದಲ್ಲಿ ಗ್ರಾಮೀಣ ಹಣಕಾಸು ವ್ಯವಸ್ಥೆಯ ನೇತಾರ ನಾಗಿರುವ ರಾಷ್ಟ್ರೀಯ ಬ್ಯಾಂಕು ರಾಜ್ಯ ಸರ್ಕಾರಗಳಿಗೆ, ವಾಣಿಜ್ಯ ಬ್ಯಾಂಕುಗಳಿಗೆ, ಸಹಕಾರಿ ಬ್ಯಾಂಕುಗಳಿಗೆ, ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳಿಗೆ ಮತ್ತು ಗ್ರಾಮೀಣ ಹಣಕಾಸಿನ ಪೂರೈಕೆಯಲ್ಲಿ ನಿರತವಾಗಿರುವ ಇತರ ಸಂಸ್ಥೆಗಳಿಗೆ ಹಣಕಾಸಿನ ಸಂಪನ್ಮೂಲಗಳನ್ನು ಒದಗಿಸುತ್ತದೆ.

**3. ಕಾರ್ಯನೀತಿಯ ಅಗ್ರ ಸಂಸ್ಥೆ (Apex Institution for Policy) :** ಕೃಷಿ, ಗ್ರಾಮೀಣ ಅಭಿವೃದ್ಧಿ, ಸಣ್ಣ ಕೈಗಾರಿಕೆಗಳು ಮತ್ತು ಕರಕುಶಲ ಕೈಗಾರಿಕೆಗಳಿಗೆ ಸಂಬಂಧಿಸಿದಂತೆ, ಕಾರ್ಯನೀತಿ, ಯೋಜನೆ ಮತ್ತು ಕಾರ್ಯಕ್ರಮಗಳನ್ನು ಕುರಿತಂತೆ ಇದು ಇಡೀ ದೇಶದಲ್ಲಿ ಅಗ್ರ ಸಂಸ್ಥೆಯಾಗಿದೆ.

**4. ಸಮಗ್ರ ಸಾಲ ಪೂರೈಕೆ (Provision of Integrated Loan) :** ರಾಷ್ಟ್ರೀಯ ಬ್ಯಾಂಕು ನಿರ್ದಿಷ್ಟವಾಗಿ ಕೃಷಿಗೆ ಮತ್ತು ವಿಶಾಲವಾಗಿ ಇಡೀ ಗ್ರಾಮೀಣ ಅರ್ಥವ್ಯವಸ್ಥೆಯ ಅಭಿವೃದ್ಧಿಗೆ ಅಗತ್ಯವಿರುವ ಸಮಗ್ರ ಸಾಲವನ್ನು ಪೂರೈಸುವ ಸಂಸ್ಥೆಯಾಗಿದೆ.

**5. ಹೂಡಿಕೆ ಉದ್ದರಿ ಪೂರೈಕೆ (Supply of Investment Credit) :** ಅದು ವ್ಯವಸಾಯ, ಸಣ್ಣ ಕೈಗಾರಿಕೆಗಳು, ಗುಡಿ ಕೈಗಾರಿಕೆ ಗಳು, ಗ್ರಾಮೀಣ ಕುಶಲ ಕಲೆ, ಸಣ್ಣ ವ್ಯಾಪಾರ

Scanned by CamScanner

ಮೊದಲಾದ ವಲಯಗಳಿಗೆ ಹೂಡಿಕೆಯ ಉದ್ದರಿಯನ್ನು ಪೂರೈಕೆ ಮಾಡುತ್ತದೆ.

### ಸಂಪನ್ಮೂಲಗಳು (Resources)

ರಾಷ್ಟ್ರೀಯ ಬ್ಯಾಂಕಿನ ಒಟ್ಟು ಪಾವತಿಯಾದ ಪ್ರಾರಂಭಿಕ ಷೇರು ಬಂಡವಾಳವು 100 ಕೋಟಿ ರೂಪಾಯಿಗಳು ಆಗಿದೆ. ಭಾರತ ಸರ್ಕಾರದ ಪೂರ್ವ ಅನುಮತಿಯೊಂದಿಗೆ ಇದನ್ನು 500 ಕೋಟಿ ರೂಪಾಯಿಗಳಿಗೆ ಹೆಚ್ಚಿಸಬಹುದಾಗಿದೆ. ಈ ಷೇರು ಬಂಡವಾಳವನ್ನು ಭಾರತದ ರಿಜರ್ವ್ ಬ್ಯಾಂಕು ಮತ್ತು ಭಾರತ ಸರಕಾರ ಸಮಪ್ರಮಾಣದಲ್ಲಿ ಒದಗಿಸಿವೆ.

ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ನಿಗಮದ ಎಲ್ಲಾ ಸ್ವತ್ತುಗಳನ್ನು ರಾಷ್ಟ್ರೀಯ ಬ್ಯಾಂಕಿಗೆ ವರ್ಗಾಯಿಸಲಾಗಿದೆ. ಅಲ್ಲದೆ ಭಾರತದ ರಿಜರ್ವ್ ಬ್ಯಾಂಕಿನ ಬಳಿ ಇದ್ದ "ಕೃಷಿಯ ದೀರ್ಘಾವಧಿ ಕಾರ್ಯನಿರ್ವಹಣೆಯ ನಿಧಿ" (National Agricultural Longterm operations Fund) ಮತ್ತು "ರಾಷ್ಟ್ರೀಯ ಕೃಷಿಯ ಸ್ಥಿರತೆಯ ನಿಧಿ" (National Agricultural Stabilisation Fund) ಗಳನ್ನು ಇದಕ್ಕೆ ವರ್ಗಾಯಿಸಲಾಗಿದೆ. ಈ ನಿಧಿಗಳಿಂದ 1645 ಕೋಟಿ ರೂಪಾಯಿಗಳು ರಾಷ್ಟ್ರೀಯ ಬ್ಯಾಂಕಿಗೆ ದೊರೆತಿರುತ್ತವೆ. ಕೇಂದ್ರ ಸರಕಾರ, ವಿಶ್ವ ಬ್ಯಾಂಕು ಮತ್ತಿತರ ಮೂಲಗಳಿಂದ ರಾಷ್ಟ್ರೀಯ ಬ್ಯಾಂಕು ಸಾಲಗಳನ್ನು ಪಡೆಯುತ್ತದೆ. ರಾಜ್ಯ ಸಹಕಾರಿ ಬ್ಯಾಂಕುಗಳು ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು ರಿಜರ್ವ್ ಬ್ಯಾಂಕಿಗೆ ಮರುಪಾವತಿ ಮಾಡಬೇಕಾಗಿದ್ದ ಸಾಲಗಳನ್ನು ರಾಷ್ಟ್ರೀಯ ಬ್ಯಾಂಕು ಸ್ಥಾಪನೆಯಾದ ಕೂಡಲೇ ಅದಕ್ಕೆ ವರ್ಗಾಯಿಸಲಾಯಿತು. ಇದರ ಮೊತ್ತ 760 ಕೋಟಿ ರೂಪಾಯಿಗಳು ಆಗಿದ್ದಿತು. ಕೇಂದ್ರ ಮತ್ತು ರಾಜ್ಯ ಸರಕಾರಗಳು, ಭೂ ಅಭಿವೃದ್ಧಿ ಬ್ಯಾಂಕುಗಳು ಹಾಗೂ ರಾಜ ಸಹಕಾರಿ ಬ್ಯಾಂಕುಗಳಿಂದ 1 ವರ್ಷಕ್ಕಿಂತ ಹೆಚ್ಚಿನ ಅವಧಿಗೆ ರಾಷ್ಟ್ರೀಯ ಬ್ಯಾಂಕು ಠೇವಣಿಗಳನ್ನು ಸ್ವೀಕರಿಸಬಹುದಾಗಿದೆ.

2016-17 ನೇ ಸಾಲಿನಲ್ಲಿ ನಬಾರ್ಡ್ 2,631 ಕೋಟಿ ರೂಪಾಯಿಗಳಷ್ಟು ನಿವ್ವಳ ಲಾಭಗಳನ್ನು ಗಳಿಸಿರುತ್ತದೆ. ಇದು ಕಳೆದ ಸಾಲಿಗಿಂತ ಶೇಕಡ 4.24 ರಷ್ಟು ಏರಿಕೆಯಾಗಿದೆ.

2016-17 ರಲ್ಲಿ 9 ಲಕ್ಷ ಕೋಟಿ ರೂಪಾಯಿಗಳಷ್ಟು ಕೃಷಿ ಸಾಲವನ್ನು ವಿತರಿಸಲಾಯಿತು. 2017-18 ರಲ್ಲಿ ಇದು 10 ಲಕ್ಷ ಕೋಟಿ ರೂಪಾಯಿಗಳ ಮೊತ್ತವನ್ನು ಮೀರುವ ಸಾಧ್ಯತೆ ಇರುತ್ತದೆ.

ಕರ್ನಾಟಕ ರಾಜ್ಯಕ್ಕೆ ಸಂಬಂಧಿಸಿದಂತೆ ನಬಾರ್ಡ್ 2016-17 ರಲ್ಲಿ 7,187 ಕೋಟಿ ರೂಪಾಯಿಗಳ ದೀರ್ಘಾವಧಿ ಕೃಷಿ ಸಾಲವನ್ನು ಒದಗಿಸಿರುತ್ತದೆ. ಇದು ದೇಶದಲ್ಲಿ ಇತರೆ ಯಾವುದೇ ರಾಜ್ಯಕ್ಕೆ ನೀಡಿದ್ದಕ್ಕಿಂತ ಹೆಚ್ಚಿನ ಸಾಲ ಮೊತ್ತವಾಗಿರುತ್ತದೆ. ಇದೇ ಸಾಲಿನಲ್ಲಿ ಅದು ರಾಜ್ಯದಲ್ಲಿ ಗ್ರಾಮೀಣ ಮತ್ತು ಸಹಕಾರಿ ಬ್ಯಾಂಕುಗಳಿಗೆ 5,547 ಕೋಟಿ ರೂಪಾಯಿಗಳ ಬೆಳೆ ಸಾಲವನ್ನು ಒದಗಿಸಿದೆ. ಅಲ್ಲದೆ ರೈತ ಉತ್ಪಾದಕ ಸಂಘಟನೆಗಳ ಅಭಿವೃದ್ಧಿ ಮತ್ತು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಬಹು ಉದ್ದೇಶಿತ ಸಂಸ್ಥೆಗಳನ್ನಾಗಿ ಪರಿವರ್ತಿಸಲು ೨೭ ಕೋಟಿ ರೂಪಾಯಿಗಳನ್ನು ಒದಗಿಸಿರುತ್ತದೆ. ಗ್ರಾಮೀಣ ಮೂಲ ಸೌಲಭ್ಯ ಅಭಿವೃದ್ಧಿಗಾಗಿ ನಬಾರ್ಡ್ ರಾಜ್ಯ ಸರ್ಕಾರಕ್ಕೆ 2016-17 ರಲ್ಲಿ 1,054 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿರುತ್ತದೆ. ಒಟ್ಟಾರೆಯಾಗಿ, ಈ ಸಾಲಿನಲ್ಲಿ ನಬಾರ್ಡ್ ಕರ್ನಾಟಕ ರಾಜ್ಯದಲ್ಲಿ 14,910 ಕೋಟಿ ರೂಪಾಯಿಗಳ ವಹಿವಾಟು ನಡೆಸುವ ಮೂಲಕ ಸಾರ್ವಜನಿಕ ದಾಖಲೆ ಬರೆದಿರುತ್ತದೆ.

### ನಬಾರ್ಡ್‌ನ ಕಾರ್ಯಗಳು (Functions of NABARD)

ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಯ ಬ್ಯಾಂಕು ನಿರ್ವಹಿಸುವ ಕಾರ್ಯಗಳು ಮುಂದಿನಂತಿವೆ.

**1. ಪುನರ್ಧನ ಸೌಲಭ್ಯ (Refinance Facility):** ಕೃಷಿ, ಸಣ್ಣ ಪ್ರಮಾಣದ ಕೈಗಾರಿಕೆಗಳು, ಗ್ರಾಮೀಣ ಕೈಗಾರಿಕೆಗಳು, ಕುಶಲ ಕೈಗಾರಿಕೆಗಳು ಮೊದಲಾದ ಕ್ಷೇತ್ರಗಳಿಗೆ ವಿವಿಧ ಸಂಸ್ಥೆಗಳು ನೀಡಿದ ಸಾಲದ ಮೇಲೆ ಇದು ಪುನರ್ಧನ ಸೌಲಭ್ಯವನ್ನು ಒದಗಿಸುತ್ತದೆ.

**2. ಅಲ್ಪಾವಧಿಯ, ಮಧ್ಯಮಾವಧಿಯ ಮತ್ತು ದೀರ್ಘಾವಧಿಯ ಸಾಲ ನೀಡಿಕೆ (Short-term, Medium-term and Long-term Lending):** ಅದು ರಾಜ್ಯ ಸಹಕಾರಿ ಬ್ಯಾಂಕುಗಳಿಗೆ, ಭೂ-ಅಭಿವೃದ್ಧಿ ಬ್ಯಾಂಕುಗಳಿಗೆ, ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳಿಗೆ ಮತ್ತು ಭಾರತದ ರಿಸರ್ವ್ ಬ್ಯಾಂಕಿನ ಮನ್ನಣೆ ಪಡೆದ ಇತರ ಹಣಕಾಸಿನ ಸಂಸ್ಥೆಗಳಿಗೆ ಅಲ್ಪಾವಧಿಯ, ಮಧ್ಯಮಾವಧಿಯ ಮತ್ತು ದೀರ್ಘಾವಧಿಯ ಸಾಲಗಳನ್ನು ನೀಡುತ್ತದೆ.

**3. ಷೇರು ಬಂಡವಾಳಕ್ಕೆ ವಂತಿಗೆ ನೀಡಿಕೆ (Subscription to Share Capital):** ಕೃಷಿ ಮತ್ತು ಗ್ರಾಮೀಣ

Scanned by CamScanner

ಅಭಿವೃದ್ಧಿಯಲ್ಲಿ ತೊಡಗಿದ ಯಾವುದೇ ಸಂಸ್ಥೆಯ ಷೇರು ಬಂಡವಾಳಕ್ಕೆ ಇದು ತನ್ನ ವಂತಿಗೆಯನ್ನು ಸಲ್ಲಿಸಬಹುದು ಹಾಗೂ ಅಂತಹ ಸಂಸ್ಥೆಯ ಬಂಡವಾಳ ಪತ್ರ ಮತ್ತು ಸಾಲಪತ್ರಗಳನ್ನು ಕೊಂಡುಕೊಳ್ಳಬಹುದು.

**4. ರಾಜ್ಯ ಸರಕಾರಗಳಿಗೆ ದೀರ್ಘಾವಧಿ ಸಾಲ** (Long-term Loans to State Governments): ರಾಜ್ಯ ಸರಕಾರಗಳು ಸಹಕಾರಿ ಪತ್ತಿನ ಸಂಘಗಳಿಗೆ ಷೇರು ಬಂಡವಾಳವನ್ನು ಒದಗಿಸಲು ಸಹಾಯಕಾರಿಯಾಗುವಂತೆ ಅವುಗಳಿಗೆ ಇಪ್ಪತ್ತು ವರ್ಷಗಳ ವಾಯ್ದೆಯ ದೀರ್ಘಾವಧಿ ಸಾಲಗಳನ್ನು ರಾಷ್ಟ್ರೀಯ ಬ್ಯಾಂಕು ನೀಡುತ್ತದೆ.

**5. ತರಬೇತಿ, ಸಂಶೋಧನೆ ಮತ್ತು ಸಮಾಲೋಚನೆಯ ಸೇವೆ** (Training, Research and Consultancy Service): ರಾಷ್ಟ್ರೀಯ ಬ್ಯಾಂಕು ಒಂಟಿಯಾಗಿ ಅಥವಾ ಸಹಕಾರಿ ತರಬೇತಿ ಕೇಂದ್ರಗಳು ಮತ್ತು ರಾಜ್ಯ ಸಹಕಾರಿ ಬ್ಯಾಂಕುಗಳ ಸಹಯೋಗದೊಂದಿಗೆ ಸಹಕಾರಿ ಸಂಸ್ಥೆಗಳಿಗೆ, ವಾಣಿಜ್ಯ ಬ್ಯಾಂಕುಗಳಿಗೆ, ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳಿಗೆ ತರಬೇತಿ, ಸಂಶೋಧನೆ ಮತ್ತು ಸಮಾಲೋಚನೆಯ ಸೇವೆಗಳನ್ನು ಒದಗಿಸುತ್ತದೆ.

**6. ವಿವಿಧ ಸಂಸ್ಥೆಗಳ ನಡುವೆ ಸಮನ್ವಯ ಸಾಧನೆ** (Achieving Co-ordination among Different Institutions): ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಯಲ್ಲಿ ತೊಡಗಿರುವ ರಾಷ್ಟ್ರಮಟ್ಟದ ಹಾಗೂ ರಾಜ್ಯಮಟ್ಟದ ಸಂಸ್ಥೆಗಳು, ಯೋಜನಾ ಆಯೋಗ, ರಾಜ್ಯ ಸರಕಾರಗಳು, ಕೇಂದ್ರ ಸರಕಾರ – ಇವೆಲ್ಲವುಗಳ ಚಟುವಟಿಕೆಗಳಲ್ಲಿ ಸಮನ್ವಯವನ್ನು ಸಾಧಿಸುವುದು ಇದರ ಮತ್ತೊಂದು ಮುಖ್ಯ ಕಾರ್ಯವಾಗಿದೆ.

**7. ಬ್ಯಾಂಕುಗಳ ಪರಿವೀಕ್ಷಣೆ** (Inspection of Banks): ರಾಜ್ಯ ಸಹಕಾರಿ ಬ್ಯಾಂಕುಗಳು, ಭೂ ಅಭಿವೃದ್ಧಿ ಬ್ಯಾಂಕುಗಳು ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ಪರಿವೀಕ್ಷಣೆ ಮತ್ತು ತನಿಖೆಯನ್ನು ರಾಷ್ಟ್ರೀಯ ಬ್ಯಾಂಕು ಕೈಗೊಳ್ಳಬಹುದಾಗಿದೆ.

**8. ಸಮಸ್ಯೆಗಳ ನಿವಾರಣೆಗೆ ಸಲಹೆಗಳು** (Suggestions for Removal of Problems): ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಯ ಸಮಸ್ಯೆಗಳನ್ನು ಅಧ್ಯಯನ ಮಾಡಿ ಅವುಗಳ ನಿವಾರಣೆಗೆ ನಬಾರ್ಡ್ ಸಲಹೆಗಳನ್ನು ನೀಡುತ್ತದೆ. ಇದಕ್ಕಾಗಿ ಅಧ್ಯಯನ ಮತ್ತು ಸಂಶೋಧನೆಯನ್ನು ಕೈಗೊಳ್ಳಲು ಇದು ಅನುಭವಿ ಸಿಬ್ಬಂದಿಯನ್ನು ಹೊಂದಿದೆ. ಈ ಚಟುವಟಿಕೆ ಗಳಿಗಾಗಿ ರಾಷ್ಟ್ರೀಯ ಬ್ಯಾಂಕು "ಸಂಶೋಧನೆ ಮತ್ತು ಅಭಿವೃದ್ಧಿ ನಿಧಿ" (Research and Development Fund) ಎಂಬ ನಿಧಿಯೊಂದನ್ನು ಹೊಂದಿದೆ.

**9. ಕಾರ್ಯನೀತಿಗಳ ಮತ್ತು ಯೋಜನೆಗಳ ಸೂತ್ರೀಕರಣಕ್ಕೆ ಮಾರ್ಗದರ್ಶನ** (Guidance for Formulation of Policies and Schemes): ಕೃಷಿ, ಗ್ರಾಮೀಣ ಅಭಿವೃದ್ಧಿ, ಸಣ್ಣ ಪ್ರಮಾಣದ ಉದ್ಯಮಗಳು ಮತ್ತು ಗ್ರಾಮೀಣ ಕೈಗಾರಿಕೆಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಕಾರ್ಯ ನೀತಿ ಮತ್ತು ಯೋಜನೆಗಳ ಸೂತ್ರೀಕರಣಕ್ಕೆ ಇದು ಮಾರ್ಗದರ್ಶನ ನೀಡುತ್ತದೆ.

## ನಬಾರ್ಡ್‌ನ ಇತ್ತೀಚಿನ ಅಭಿವೃದ್ಧಿ ಕಾರ್ಯಕ್ರಮಗಳು
## (Recent Development Programmes of NABARD)

ನಬಾರ್ಡ್ ಅಥವಾ 'ರಾಷ್ಟ್ರೀಯ ಬ್ಯಾಂಕು' ಗ್ರಾಮೀಣ ಪತ್ತಿನ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವ ಉದ್ದೇಶದಿಂದ ಅನೇಕ ಕಾರ್ಯಕ್ರಮಗಳನ್ನು ಜಾರಿಗೆ ತಂದಿರುತ್ತದೆ. ಇಂತಹ ಪ್ರಮುಖ ಕಾರ್ಯಕ್ರಮಗಳನ್ನು ಕೆಳಗಿನಂತೆ ವಿವರಿಸಬಹುದು.

**1. ಕಿಸಾನ್ ಕ್ರೆಡಿಟ್ ಕಾರ್ಡ್ ಯೋಜನೆ** (The Scheme of Kisan Credit Cards): 1998-99ನೇ ಸಾಲಿನ ಕೇಂದ್ರ ಸರ್ಕಾರದ ಆಯವ್ಯಯದಲ್ಲಿ ಮಾಡಲಾದ ಘೋಷಣೆಗೆ ಬದ್ಧವಾಗಿ ನಬಾರ್ಡ್ ರಿಸರ್ವ್ ಬ್ಯಾಂಕಿನೊಡನೆ ಮತ್ತು ಪ್ರಮುಖ ಬ್ಯಾಂಕುಗಳೊಡನೆ ಸಮಾಲೋಚನೆಗಳನ್ನು ನಡೆಸಿ 'ಕಿಸಾನ್ ಕ್ರೆಡಿಟ್ ಕಾರ್ಡ್' ಯೋಜನೆಯನ್ನು ಜಾರಿಗೆ ತಂದಿದೆ. ಕೃಷಿಕರಿಗೆ ಒಂದು ಪೂರ್ಣ ವರ್ಷದ ಅವಧಿಗೆ ಅಗತ್ಯವಿರುವ ಉತ್ಪಾದನ ಸಾಲ ಮತ್ತು ಬೆಳೆಯ ಉತ್ಪಾದನೆಗೆ ಹೊಂದಿಕೊಂಡ ಸಹಾಯಕ ಚಟುವಟಿಕೆಗಳಿಗೆ ಆವಶ್ಯಕವಿರುವ ಮೊಬಲಗನ್ನು ಸಿದ್ಧ ಸಾಲವಾಗಿ ಒದಗಿಸುವ ಉದ್ದೇಶವನ್ನು ಕಿಸಾನ್ ಕ್ರೆಡಿಟ್ ಕಾರ್ಡ್ ಯೋಜನೆಯು ಹೊಂದಿದೆ. ಈ ಯೋಜನೆಯಲ್ಲಿ ಸಾಲವನ್ನು ಬಯಸುವ ರೈತನಿಗೆ ಒಂದು ಉದ್ದರಿ ಕಾರ್ಡನ್ನು (Credit Card) ಕೊಡಲಾಗುತ್ತದೆ.

ಉದ್ದರಿ ಕಾರ್ಡಿನಲ್ಲಿ ರೈತರ ಹೆಸರು, ವಿಳಾಸ, ಭೂ ಹಿಡುವಳಿಗಳ ವಿವರಗಳು, ಸಾಲ ಪಡೆಯುವಿಕೆಯ ಮಿತಿ (Borrowing Limit), ಕಾರ್ಡಿನ ಸಂಖ್ಯೆ, ರೈತರ ಷೇರು ಸಂಖ್ಯೆ, ವಿತರಿಸಲಾದ ಸಾಲದ ಮೊಬಲಗು, ಅಸಲು ಮತ್ತು ಬಡ್ಡಿ ಜಮಾ, ಅದು ಔಚಿತ್ಯವನ್ನು ಹೊಂದಿರುವ ಅವಧಿ ಮೊದಲಾದ ವಿವರಗಳನ್ನು ಬರೆಯಲಾಗಿರುತ್ತದೆ. ಉದ್ದರಿ ಪುಸ್ತಕವು (ಕಾರ್ಡ್) ಗುರುತಿನ

Scanned by CamScanner

ಚೀಟಿ (Identity Card) ಯಂತೆ ಕಾರ್ಯ ನಿರ್ವಹಿಸುತ್ತದೆ ಮತ್ತು ಅದರಲ್ಲಿ ನಿರಂತರವಾಗಿ ವ್ಯವಹಾರಗಳ ವಿವರಗಳನ್ನು ನಮೂದಿಸಲಾಗುತ್ತದೆ.

ಬೆಳೆ ಸಾಲವನ್ನು ಅವಧಿ ಪ್ರಾರಂಭಕ್ಕೆ ಮುಂಚಿತವಾಗಿಯೇ, ಅಂದರೆ ಪ್ರತಿ ವರ್ಷ ಮೇ ಅಥವಾ ಜೂನ್ ತಿಂಗಳಿನಲ್ಲಿ ಮಂಜೂರು ಮಾಡಲಾಗುತ್ತದೆ. ಸಾಲದ ಮಿತಿಯ ಪ್ರಕಾರ ಮಂಜೂರು ಮಾಡಲಾದ ಸಾಲದ ಮೊತ್ತವನ್ನು ರೈತರ ಖಾತೆಗೆ ಜಮಾ ನೀಡಲಾಗುತ್ತದೆ ಮತ್ತು ಕಿಸಾನ್ ಕ್ರೆಡಿಟ್ ಕಾರ್ಡಿನಲ್ಲಿ ನಮೂದಿಸಲಾಗುತ್ತದೆ. ಕೃಷಿ ಕಾರ್ಯಾಚರಣೆಗಳ ಉದ್ದಕ್ಕೂ, ಅಂದರೆ ಸುಮಾರು ಒಂದು ವರ್ಷದ ಕಾಲವೂ, ಅಗತ್ಯ ವಿರುವಷ್ಟೇ ಮೊಬಲಗನ್ನು ಖಾತೆಯಿಂದ ತೆಗೆದುಕೊಳ್ಳಬಹುದು ಮತ್ತು ಮರುಪಾವತಿ ಮಾಡುತ್ತಿರಬಹುದು. ಖಾತೆಯಿಂದ ತೆಗೆದುಕೊಳ್ಳಲಾದ ಸಾಲದ ಮೊಬಲಗಿನ ಮೇಲೆ ಮಾತ್ರ ಬಡ್ಡಿಯನ್ನು ವಿಧಿಸಲಾಗುತ್ತದೆ. ಮರುಪಾವತಿಸಲಾದ ಸಾಲದ ಮೊತ್ತ, ಪಾವತಿಸಲಾದ ಬಡ್ಡಿಯ ಮೊಬಲಗು, ಸಾಲದ ಉಳಿಕೆ ಮೊತ್ತ, ದಿನಾಂಕ ಮೊದಲಾದವುಗಳೆಲ್ಲವನ್ನೂ ಇದರಲ್ಲಿ ನಮೂದಿಸಲಾಗುತ್ತದೆ. ಆ ಪ್ರಕಾರ, ಕಿಸಾನ್ ಕ್ರೆಡಿಟ್ ಕಾರ್ಡ್ ಮೂಲಕ ವರ್ಷದಾದ್ಯಂತ ನಗದು ಹಣವನ್ನು ಪಡೆದುಕೊಳ್ಳಲು ಮತ್ತು ಮರುಪಾವತಿಸಲು ಅವಕಾಶವಿರುತ್ತದೆ.

2008-09ರಲ್ಲಿ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು ಮತ್ತು ಸಹಕಾರಿ ಬ್ಯಾಂಕುಗಳು ರೂ. 1700 ಕೋಟಿ ರೂಪಾಯಿಗಳ ಸಾಲ ಸೌಲಭ್ಯವನ್ನು ಒಳಗೊಂಡಂತೆ 2.75 ಲಕ್ಷ ಉದ್ದರಿ ಕಾರ್ಡುಗಳನ್ನು ವಿತರಣೆ ಮಾಡಿದವು.

**2. ದುರ್ಬಲ ಸಹಕಾರಿ ಬ್ಯಾಂಕುಗಳ ಸೇವಾ ಪ್ರದೇಶಗಳಲ್ಲಿ ಉದ್ದರಿ ಪ್ರವಹನದ ಹೆಚ್ಚಳ** (Increase in the Flow of Credit in the Service Areas of Weaker Co-operative Banks): ತಳಮಟ್ಟದಲ್ಲಿ ಉದ್ದರಿಯ ಪ್ರವಹನವನ್ನು ಅಧಿಕಗೊಳಿಸುವ ಸಲುವಾಗಿ ವಿಭಿನ್ನ ವರ್ಗಗಳಿಗೆ ನೀಡಲಾಗುವ ಅಲ್ಪಾವಧಿ ಸಾಲದ ಮಿತಿಗಳನ್ನು ನಬಾರ್ಡ್ ಹೆಚ್ಚಿಸಿದೆ. ರಾಜ್ಯ ಸಹಕಾರಿ ಬ್ಯಾಂಕುಗಳು ಮತ್ತು ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳು ಸಾಲ ನೀಡಿಕೆಯಲ್ಲಿ ಅರ್ಹತೆಯನ್ನು ಪಡೆದಿಲ್ಲದಿದ್ದರೂ ಅವುಗಳಿಗೆ ರಿಯಾಯಿತಿ ದರದಲ್ಲಿ ಸಾಲವನ್ನು ಪೂರೈಕೆ ಮಾಡುವ ನೀತಿಯನ್ನು ನಬಾರ್ಡ್ ಅನುಸರಿಸುತ್ತಿದೆ. ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಹೆಚ್ಚಿನ ಮೊತ್ತದ ಸಾಲವು ದೊರಕುವಂತೆ ವ್ಯವಸ್ಥೆ ಮಾಡಲಾಗಿದೆ. ಅಂತೆಯೇ ಗಿರಿಜನರು ವಾಸಿಸುತ್ತಿರುವ ಪ್ರದೇಶಗಳಲ್ಲಿ ಕಾರ್ಯಾಚರಣೆ ಮಾಡುತ್ತಿರುವ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಿಗೆ ಹೆಚ್ಚಿನ ಉದ್ದರಿ ಮಿತಿಯನ್ನು ಕರುಣಿಸಲಾಗಿದೆ.

**3. ಕೈಮಗ್ಗ ನೇಕಾರರಿಗೆ ಹೆಚ್ಚಿನ ಸಾಲ ಸೌಲಭ್ಯಗಳು** (Increased Credit Facilities to Handloom Weavers): ಕೈಮಗ್ಗ ನೇಕಾರರು ಅಭಿವೃದ್ಧಿ ಪ್ರಕ್ರಿಯೆಯಲ್ಲಿ ವಹಿಸುತ್ತಿರುವ ಪಾತ್ರವನ್ನು ಮನದಟ್ಟು ಮಾಡಿಕೊಳ್ಳಲಾಗಿದ್ದು ಅವರಿಗೆ ಸಾಲ ಸೌಲಭ್ಯಗಳು ಹೆಚ್ಚಾಗಿ ಪ್ರವಹಿಸುವಂತೆ ಮಾಡಲಾಗಿದೆ. ರಾಜ್ಯ ಕೈಮಗ್ಗ ಅಭಿವೃದ್ಧಿ ನಿಗಮಗಳ ಮೂಲಕ ಕೈಮಗ್ಗ ನೇಕಾರರಿಗೆ ಅಧಿಕ ಪ್ರಮಾಣದ ಸಾಲವನ್ನು ಒದಗಿಸಲು ನಬಾರ್ಡ್ ಮುಂದೆ ಬಂದಿದೆ.

**4. ಕಿರು ನೀರಾವರಿಗೆ ಮರು ಹಣಕಾಸಿನ ಸೌಲಭ್ಯ** (Refinance for Minor Irrigation): ಕಿರು ನೀರಾವರಿ ಮತ್ತು ಬಂಜರು ಭೂಮಿಯ ಅಭಿವೃದ್ಧಿಯಲ್ಲಿ ಹೂಡಿಕೆಯನ್ನು ಉತ್ತೇಜಿಸಲು ನಬಾರ್ಡ್ ಆಸಕ್ತಿ ವಹಿಸಿದೆ. ಕಿರು ನೀರಾವರಿ ಯೋಜನೆಗಳಲ್ಲಿ ಹಣಕಾಸಿನ ಹೂಡಿಕೆಯನ್ನು ವೃದ್ಧಿಸುವ ಉದ್ದೇಶದಿಂದ ಡಿಸೆಂಬರ್ 1, 1998ರಿಂದ ಜಾರಿಗೆ ಬರುವಂತೆ ಕಿರು ನೀರಾವರಿ ಹೂಡಿಕೆಯ ಮೇಲಿನ ಮರುಹಣಕಾಸಿನ ಸೌಲಭ್ಯದ ಮೇಲೆ ಬಡ್ಡಿಯ ದರವನ್ನು ಕಡಿಮೆ ಮಾಡಲಾಗಿದೆ. ಆ ಪ್ರಕಾರ, ಸಾಲದ ಗಾತ್ರವು ಎಷ್ಟೇ ಇದ್ದರೂ ಸಹ ವಾಣಿಜ್ಯ ಬ್ಯಾಂಕುಗಳು, ಸಹಕಾರಿ ಬ್ಯಾಂಕುಗಳು ಮತ್ತು ಪ್ರಾದೇಶಿಕ ಬ್ಯಾಂಕುಗಳು ಈ ಉದ್ದೇಶಕ್ಕಾಗಿ ನೀಡುವ ಈ ಸಾಲದ ಮೇಲಿನ ಬಡ್ಡಿಯ ದರವನ್ನು ವಾಡಿಕೆಯ ದರಕ್ಕಿಂತ ಸುಮಾರು ಶೇಕಡ 1 ರಷ್ಟು ಕಡಿಮೆ ಮಾಡಲಾಗಿರುತ್ತದೆ.

**5. ವ್ಯಷ್ಟಿ ಹಣಕಾಸಿನ ನವಪ್ರವರ್ತನೆಗಳು** (Micro-Finance Innovations): ಗ್ರಾಮೀಣ ಬಡ ಜನರು ಬ್ಯಾಂಕೋದ್ಯಮ ಸೌಲಭ್ಯಗಳಿಗೆ ಪ್ರವೇಶ ಪಡೆಯುವಂತೆ ಮಾಡುವ ಕಾರ್ಯದಲ್ಲಿ ನಬಾರ್ಡ್‌ನ ಪಾತ್ರ ಸ್ತುತ್ಯಾರ್ಹವಾದುದು. ಈ ಉದ್ದೇಶದಿಂದ ಅದು ಗ್ರಾಮೀಣ ಬಡ ವರ್ಗಗಳ ಜನರಲ್ಲಿ ಸ್ವಸಹಾಯ ಗುಂಪುಗಳನ್ನು (Self-Help Groups) ಅಭಿವೃದ್ಧಿಪಡಿಸುವ ನೀತಿಯನ್ನು ಅನುಸರಿಸುತ್ತಿದೆ. ಈ ಗುಂಪುಗಳಿಗೆ ಹಣವನ್ನು ಉಳಿತಾಯ ಮಾಡಲು ಪ್ರೇರೇಪಿಸಲಾಗುತ್ತಿದೆ ಮತ್ತು ಅವುಗಳಿಗೆ ಸಾಲ ಸೌಲಭ್ಯವನ್ನು ವಿಸ್ತರಿಸಲಾಗಿದೆ. 1998-99ನೇ ಸಾಲಿನ ಕೇಂದ್ರ ಸರ್ಕಾರದ ಆಯವ್ಯಯದಲ್ಲಿ 10,000 ಸ್ವ-ಸಹಾಯ ಗುಂಪುಗಳಿಗೆ ಬ್ಯಾಂಕುಗಳೊಡನೆ ಸಂಬಂಧವನ್ನು ಕಲ್ಪಿಸಬೇಕೆಂಬ ಗುರಿಗೆ ವಿರುದ್ಧವಾಗಿ 18,978

Scanned by CamScanner

ಗುಂಪುಗಳಿಗೆ ಬ್ಯಾಂಕುಗಳೊಡನೆ ಸಂಬಂಧ ಕಲ್ಪಿಸಲಾಯಿತು. ಈ ಗುಂಪುಗಳಿಗೆ ಇದುವರೆಗೆ ಸುಮಾರು 4,500 ಕೋಟಿ ರೂಪಾಯಿಗಳ ಸಾಲ ಸೌಲಭ್ಯವನ್ನು ಒದಗಿಸಲಾಗಿದೆ.

## ನಬಾರ್ಡ್‌ನ ನವಪ್ರವರ್ತನೆಗಳು (NABARD's Innovations)

**1. ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ (Agriculture and Rural Development):** ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಯಲ್ಲಿ ರಾಷ್ಟ್ರೀಯ ಬ್ಯಾಂಕು ಗಮನಾರ್ಹವಾದ ಸೇವೆಯನ್ನು ಸಲ್ಲಿಸುತ್ತಿದೆ. ಅದು 20 ಅಂಶದ ಕಾರ್ಯಕ್ರಮಗಳ ಅನುಷ್ಠಾನ ಮತ್ತು ದುರ್ಬಲ ವರ್ಗಗಳ ಜನರ ಏಳಿಗೆಗೆ ವಾಣಿಜ್ಯ ಬ್ಯಾಂಕುಗಳಿಂದ ಸಾಲದ ಸೌಲಭ್ಯಗಳನ್ನು ಒದಗಿಸಲು ವಿಶೇಷ ಕಾಳಜಿ ವಹಿಸಿದೆ. ಸಹಕಾರಿ ಸಂಸ್ಥೆಗಳ ಮೂಲಕ ಕೃಷಿ ಕ್ಷೇತ್ರಕ್ಕೆ ಸಾಲವು ಸಕಾಲಿಕವಾಗಿ ಮತ್ತು ಸಾಕಷ್ಟು ಪ್ರಮಾಣದಲ್ಲಿ ದೊರೆಯುವಂತೆ ಅದು ಆಸಕ್ತಿ ವಹಿಸಿದೆ. ರಾಜ್ಯ ಸಹಕಾರಿ ಬ್ಯಾಂಕುಗಳು, ಭೂ-ಅಭಿವೃದ್ಧಿ ಬ್ಯಾಂಕುಗಳು, ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು ಮತ್ತು ಸಹಕಾರಿ ಸಂಘಗಳು ದಕ್ಷವಾಗಿ ಕೆಲಸ ಮಾಡಲು ಅದು ಅನೇಕ ಸಲಹೆಗಳನ್ನು ನೀಡಿದೆ ಹಾಗೂ ಸೂತ್ರಗಳನ್ನು ರೂಪಿಸಿದೆ.

**2. ಕೃಷಿ ಪತ್ತಿನ ಸಹಕಾರ ಸಂಘಗಳ ಪುನಶ್ಚೇತನ (Revival of Agricultural Co-operative Credit Societies):** ಸದೃಢವಾಗಿಲ್ಲದ ಸಹಕಾರಿ ಪತ್ತಿನ ಸಂಘಗಳನ್ನು ಗುರುತಿಸಿ ಅವುಗಳನ್ನು ಪುನರ್ಘಟಿಸುವ ಕಾರ್ಯವನ್ನು ರಾಷ್ಟ್ರೀಯ ಬ್ಯಾಂಕು ಯಶಸ್ವಿಯುತವಾಗಿ ನೆರವೇರಿಸುತ್ತಿದೆ. ದೇಶದಲ್ಲಿ 127 ಜಿಲ್ಲಾ ಸಹಕಾರಿ ಕೇಂದ್ರ ಬ್ಯಾಂಕು ಗಳು ದುರ್ಬಲವಾಗಿರುವುವೆಂದು ಗುರುತಿಸಿ ಅವುಗಳನ್ನು ಸದೃಢ ಗೊಳಿಸಲು ಎಲ್ಲಾ ರೀತಿಯ ಕ್ರಮಗಳನ್ನು ಇದು ಕೈಗೊಂಡಿದೆ.

ಇತ್ತೀಚಿನ ವರ್ಷಗಳಲ್ಲಿ ರಾಷ್ಟ್ರೀಯ ಬ್ಯಾಂಕು ಎರಡು ವಿಶೇಷ ಯೋಜನೆಗಳನ್ನು ಜಾರಿಗೆ ತಂದಿದೆ. ಅವುಗಳೆಂದರೆ :

i. ಪತ್ತಿನ ಬಟವಾಡೆ ಪದ್ಧತಿ (Credit Delivery System), ಮತ್ತು

ii. ಪತ್ತಿನ ಮೂಲಕ ಅಭಿವೃದ್ಧಿ ಯೋಜನೆ (Development through Credit).

ಕೃಷಿ ಮತ್ತು ಸಮಗ್ರ ಗ್ರಾಮೀಣ ಅಭಿವೃದ್ಧಿಯ ಚಟುವಟಿಕೆಗಳಿಗೆ ತೀವ್ರತರದಲ್ಲಿ ಹಣಕಾಸನ್ನು ಪೂರೈಕೆ ಮಾಡುವುದು ಈ ಯೋಜನೆಗಳ ಧ್ಯೇಯವಾಗಿರುತ್ತದೆ. ಪತ್ತಿನ ಬಟವಾಡೆ ಪದ್ಧತಿಯನ್ನು 1984ರಲ್ಲಿ ಇಡೀ ದೇಶದಲ್ಲಿ ಮಹಾರಾಷ್ಟ್ರದಲ್ಲಿ ಔರಂಗಾಬಾದ್, ಗುಜರಾತಿನಲ್ಲಿ ಸಬರಕಾಂತ ಮತ್ತು ಮಧ್ಯಪ್ರದೇಶದಲ್ಲಿ ಹೊಶಂಗಾಬಾದ್ ಈ 3 ಜಿಲ್ಲೆಗಳಲ್ಲಿ ಪ್ರಾರಂಭಿಸಲಾಯಿತು. ನಂತರ ಇದನ್ನು 12 ರಾಜ್ಯಗಳಿಗೆ ವಿಸ್ತರಿಸಲಾಯಿತು. ಕರ್ನಾಟಕದಲ್ಲಿ ಹಾಸನ ಜಿಲ್ಲೆಯನ್ನು ಇದಕ್ಕಾಗಿ ಆಯ್ಕೆ ಮಾಡಲಾಯಿತು.

**3. ಸ್ವಸಹಾಯ ಗುಂಪುಗಳಿಗೆ ಬೆಂಬಲ ಮತ್ತು ಪುನರ್ಧನ ಸೌಲಭ್ಯ (Support and Refinance Facility to Self-help Groups):** ಸ್ವಸಹಾಯ ಗುಂಪುಗಳ ಯೋಜನೆಯ ಅನುಷ್ಠಾನದಲ್ಲಿ ನಬಾರ್ಡ್ ನಿರ್ಲಕ್ಷ್ಯವನ್ನು ತೋರಿದರೆ ಈ ಯೋಜನೆ ನೆಲಕಚ್ಚಿತೆಂದೇ ಹೇಳಬೇಕಾಗುತ್ತದೆ. ಅಷ್ಟರಮಟ್ಟಿಗೆ ನಬಾರ್ಡ್‌ನ ಸಹಕಾರ, ಬೆಂಬಲ, ಪ್ರೋತ್ಸಾಹ, ತೊಡಗಿಸಿಕೊಳ್ಳುವಿಕೆ, ಮಾರ್ಗದರ್ಶನ ಮತ್ತು ನಿರ್ದೇಶನ ಈ ಯೋಜನೆಯಲ್ಲಿ ಅಂತರ್ಗತವಾಗಿವೆ. ನಬಾರ್ಡ್‌ನ ನಿರಂತರ ಮಾರ್ಗದರ್ಶನ ಮತ್ತು ಬೆಂಬಲದ ಕೆಲವು ಪ್ರಮುಖ ಅಂಶಗಳು ಕೆಳಗಿನಂತಿವೆ.

i. ಸ್ವಸಹಾಯ ಗುಂಪುಗಳ ಯೋಜನೆಯು ಒಂದು ನವ ಪ್ರವರ್ತನೆ (Innovation) ಯಾಗಿರುವುದರಿಂದ, ಅಂದರೆ ಹೊಸ ರೀತಿಯ ಯೋಜನೆಯಾಗಿರುವುದರಿಂದ, ನಬಾರ್ಡ್ ಶೇಕಡ 100ರಷ್ಟು ಪುನರ್ಧನ ಸೌಲಭ್ಯವನ್ನು ಒದಗಿಸುತ್ತಿದೆ. ಅಂದರೆ ಸ್ವಸಹಾಯ ಗುಂಪುಗಳಿಗೆ ಸಾಲವನ್ನು ಪೂರೈಕೆ ಮಾಡುವ ಬ್ಯಾಂಕುಗಳಿಗೆ ನೇರವಾಗಿ ಅಥವಾ ಸ್ವಯಂ ಸೇವಾ ಸಂಸ್ಥೆಗಳ ಮೂಲಕ, ಅವು ನೀಡಿದ ಸಾಲದ ಪೂರ್ಣ ಮೊತ್ತವನ್ನು ಸಾಲದ ರೂಪದಲ್ಲಿ ಒದಗಿಸುತ್ತದೆ.

ii. ಸ್ವಸಹಾಯ ಗುಂಪುಗಳನ್ನು ಪ್ರಾರಂಭಿಸಿ ಅಭಿವೃದ್ಧಿ ಪಡಿಸುವ ಕಾರ್ಯಕ್ಕೆ ಅದು ಸ್ವಸಹಾಯ ಪ್ರೇರೇಪಣಾ ಸಂಸ್ಥೆಗೆ ಪ್ರೋತ್ಸಾಹ ಧನವನ್ನು ಒದಗಿಸುತ್ತದೆ.

iii. ಬ್ಯಾಂಕಿನಿಂದ ಸ್ವಸಹಾಯ ಗುಂಪಿಗೆ ಸಾಲ ಜೋಡಣೆ ಮಾಡುವ ಯೋಜನೆಯ ಅನುಷ್ಠಾನವನ್ನು ಬಲಗೊಳಿಸುವ ಉದ್ದೇಶದಿಂದ ಬ್ಯಾಂಕುಗಳ ಅಧಿಕಾರಿಗಳಿಗೆ, ವ್ಯವಸ್ಥಾಪಕರಿಗೆ ಮತ್ತು ಕ್ಷೇತ್ರ ಸಿಬ್ಬಂದಿಗೆ ನಬಾರ್ಡ್ ತರಬೇತಿ ಕಾರ್ಯಕ್ರಮಗಳನ್ನು ಮತ್ತು ಜಾಗೃತಿ ಶಿಬಿರಗಳನ್ನು ಏರ್ಪಡಿಸುತ್ತಿದೆ.

iv. ಈ ಯೋಜನೆಯ ಯಶಸ್ವಿಯುತ ಅನುಷ್ಠಾನದ ದಿಸೆಯಲ್ಲಿ ನಬಾರ್ಡ್ ಸ್ವಸಹಾಯ ಗುಂಪುಗಳ ಸದಸ್ಯರನ್ನು, ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳನ್ನು ಮತ್ತು ಬ್ಯಾಂಕಿನ ಸಿಬ್ಬಂದಿಯನ್ನು ಒಂದೆಡೆ ಸೇರಿಸಿ ಕಾರ್ಯಾಗಾರಗಳನ್ನು ಏರ್ಪಡಿಸುವ ಕೆಲಸವನ್ನು ಮಾಡುತ್ತಿದೆ.

Scanned by CamScanner

v. ವಾರ್ಷಿಕ ಕ್ರಿಯಾ ಯೋಜನೆಗಳ ತಯಾರಿಕೆ, ಗುಂಪುಗಳ ಮೌಲ್ಯೀಕರಣ, ಸಾಲ ಜೋಡಣೆ ಮೊದಲಾದ ವಿಷಯಗಳಲ್ಲಿ ನಬಾರ್ಡ್ ಸಂಬಂಧಪಟ್ಟ ಬ್ಯಾಂಕುಗಳಿಗೆ ಮತ್ತು ಸ್ವಯಂ ಸೇವಾ ಸಂಸ್ಥೆಗಳಿಗೆ ಸೂಕ್ತ ಮಾರ್ಗದರ್ಶನವನ್ನು ನೀಡುತ್ತಿದೆ.

vi. ಸ್ವಸಹಾಯ ಗುಂಪುಗಳಿಗೆ ಸಂಬಂಧಿಸಿದಂತೆ ಹೊಸ ರೀತಿಯ ಯೋಜನೆಗಳಿಗೆ, ನವಪ್ರವರ್ತನೆಗಳಿಗೆ ಮತ್ತು ಆರಂಭಶೀಲತೆಗಳಿಗೆ (Initiatives) ನಬಾರ್ಡ್ ಚುರುಕಾಗಿ ಸ್ಪಂದಿಸುತ್ತಿದೆ.

**4. ರೈತ ಕೂಟಗಳ ಸ್ಥಾಪನೆ** (Extiblishment of Farmers' Clubs): ರೈತಕೂಟಗಳ ಸ್ಥಾಪನೆಯು ನಬಾರ್ಡ್‌ನ ಒಂದು ಪ್ರಮುಖ ನವಪ್ರವರ್ತನೆಯಾಗಿದೆ. 1998 ರಿಂದ ಅದು ಈ ಕೂಟಗಳನ್ನು ಸ್ಥಾಪಿಸಲು ವಾಣಿಜ್ಯ ಬ್ಯಾಂಕುಗಳು, ಸಹಕಾರಿ ಬ್ಯಾಂಕುಗಳು ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳಿಗೆ ಬೆಂಬಲ ಮತ್ತು ನೆರವನ್ನು ಒದಗಿಸುತ್ತಿದೆ. ಗ್ರಾಮೀಣ ಪ್ರದೇಶಗಳಲ್ಲಿ ಯಾವುದಾದರೂ ಒಂದು ಬ್ಯಾಂಕು ಅಥವಾ ಸಹಕಾರ ಸಂಘದ ವತಿಯಿಂದ ಸುಮಾರು 25 ರಿಂದ 140 ಮಂದಿ ಪ್ರಗತಿಪರ ರೈತರನ್ನು ಸೇರಿಸಿಕೊಂಡು ಒಂದು ಕೂಟವನ್ನು ರಚಿಸಲಾಗುತ್ತದೆ. ಸಾಲದ ಸದ್ಬಳಕೆ, ಗ್ರಾಮೀಣ ಅಭಿವೃದ್ಧಿ, ಪ್ರಗತಿಪರ ಕೃಷಿ, ಆರ್ಥಿಕವಾಗಿ ಲಾಭದಾಯಕವಾದ ಹೊಸ ಚಟುವಟಿಕೆಗಳನ್ನು ಕೈಗೊಳ್ಳುವಿಕೆ ಮೊದಲಾದ ವಿಷಯಗಳ ಬಗೆಗೆ ಈ ಕೂಟದ ಸದಸ್ಯರು ಆಗಿಂದಾಗ್ಗೆ ಸಭೆಗಳನ್ನು ಸೇರಿ ಚರ್ಚಿಸುತ್ತಾರೆ. ಈ ಕೂಟಗಳ ಸ್ಥಾಪನೆ ಮತ್ತು ನಿರ್ವಹಣೆಗೆ ನಬಾರ್ಡ್ ಹಣಕಾಸಿನ ನೆರವನ್ನು ಒದಗಿಸುತ್ತದೆ.

**5. ಗ್ರಾಮೀಣ ಮೂಲಸೌಲಭ್ಯ ಅಭಿವೃದ್ಧಿ ನಿಧಿ**
(Rural Infrastructure Development Fund)

ಕೃಷಿ ವಲಯದಲ್ಲಿ, ಅದರಲ್ಲಿಯೂ ಗ್ರಾಮೀಣ ಮೂಲ ಸೌಲಭ್ಯದಲ್ಲಿ ಹೂಡಿಕೆಯು ತೀರಾ ಕೆಳಮಟ್ಟದಲ್ಲಿರುವುದು ಸರ್ಕಾರವನ್ನು ಚಿಂತೆಗೀಡುಮಾಡಿತ್ತು. ಸಂಪನ್ಮೂಲಗಳ ಕೊರತೆಯ ಕಾರಣದಿಂದ ಪೂರ್ಣಗೊಳ್ಳದೆ ನಿಂತುಹೋಗಿದ್ದ ಮೂಲ ಸೌಲಭ್ಯ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸಹಾಯಕಾರಿಯಾಗುವಂತೆ ರಾಜ್ಯ ಸರ್ಕಾರಗಳಿಗೆ ನೆರವನ್ನು ಒದಗಿಸಲು ಗ್ರಾಮೀಣ ಮೂಲ ಸೌಲಭ್ಯ ಅಭಿವೃದ್ಧಿ ನಿಧಿಯನ್ನು ಸ್ಥಾಪಿಸಲಾಗಿರುತ್ತದೆ. ನೀರಾವರಿ ಪರಿಯೋಜನೆಗಳು, ಗ್ರಾಮೀಣ ರಸ್ತೆಗಳು, ಗ್ರಾಮೀಣ ಸೇತುವೆಗಳು, ಪ್ರವಾಹ ನಿಯಂತ್ರಣ, ಗೋದಾಮುಗಳ ಮತ್ತು ಶೀತಲ ಗೃಹಗಳ ನಿರ್ಮಾಣ, ಅರಣ್ಯಾಭಿವೃದ್ಧಿ, ಮೀನುಗಾರಿಕೆ, ಒಳನಾಡ ಜಲಮಾರ್ಗಗಳು ಮುಂತಾದುವ ಇಂತಹ ಮೂಲ ಸೌಲಭ್ಯಗಳ ವ್ಯಾಪ್ತಿಯಲ್ಲಿ ಬರುತ್ತವೆ.

1995-96 ನೇ ಸಾಲಿನ ಕೇಂದ್ರ ಸರ್ಕಾರದ ಆಯವ್ಯಯದಲ್ಲಿ ನಬಾರ್ಡ್‌ನಲ್ಲಿ 2,000 ಕೋಟಿ ರೂಪಾಯಿಗಳ ಮೊಬಲಗಿನ ಮೂಲ ನಿಧಿಯೊಂದಿಗೆ ಗ್ರಾಮೀಣ ಮೂಲ ಸೌಲಭ್ಯ ಅಭಿವೃದ್ಧಿ ನಿಧಿಯನ್ನು ಸ್ಥಾಪಿಸಲು ಪ್ರಸ್ತಾಪಿಸಲಾಯಿತು. ಈಗ ಈ ನಿಧಿಯಲ್ಲಿ 60,000 ಕೋಟಿ ರೂಪಾಯಿಗಳ ಮೂಲ ಧನವಿರುತ್ತದೆ. 2015-16 ರ ವರೆಗೆ ಈ ನಿಧಿಯ ಮೂಲಕ 55,000 ಕೋಟಿ ರೂಪಾಯಿಗಳ ಹಣಕಾಸಿನ ನೆರವನ್ನು ಒದಗಿಸಲಾಗಿರುತ್ತದೆ.

ನಬಾರ್ಡ್ ವಿವಿಧ ಬ್ಯಾಂಕುಗಳಿಂದ ಠೇವಣಿಗಳ ರೂಪದಲ್ಲಿ ಹಣವನ್ನು ಸಂಗ್ರಹಿಸುತ್ತದೆ. ಈ ಹಣ ಮತ್ತು ಮೂಲ ನಿಧಿಯ ನೆರವಿನಿಂದ ಸಾಲಸೌಲಭ್ಯಗಳನ್ನು ವಿಭಿನ್ನ ಪರಿಯೋಜನೆಗಳಿಗೆ ನೀಡಲಾಗುತ್ತದೆ.

**6. ಜಂಟಿ ಬಾಧ್ಯತಾ ಗುಂಪುಗಳು** (Joint Liability Groups):

ಜಂಟಿ ಬಾಧ್ಯತಾ ಗುಂಪುಗಳ ರಚನೆ ಮತ್ತು ಅಭಿವೃದ್ಧಿಗೆ ಪ್ರೋತ್ಸಾಹವು ನಬಾರ್ಡ್‌ನ ಇತ್ತೀಚಿನ ನವಪ್ರವರ್ತನೆಯಾಗಿರುತ್ತದೆ. ಸ್ವಸಹಾಯ ಗುಂಪುಗಳ ಮಾದರಿಯಲ್ಲಿಯೇ ಈ ಗುಂಪುಗಳನ್ನು ರಚಿಸಿಕೊಳ್ಳ ಬೇಕಾಗಿರುತ್ತದೆ. ಪ್ರತಿಯೊಂದು ಜಂಟಿ ಬಾಧ್ಯತಾ ಗುಂಪು ನಾಲ್ಕರಿಂದ 10 ಜನ ಸದಸ್ಯರನ್ನು ಹೊಂದಿರಬೇಕು.

ಕೃಷಿ ಕಾರ್ಮಿಕರು, ಭೂರಹಿತ ಕೆಲಸಗಾರರು, ಅತಿ ಸಣ್ಣ ರೈತರು, ಕುಶಲ ಕರ್ಮಿಗಳು ಮೊದಲಾದ ವರ್ಗದ ಜನರು ಈ ಗುಂಪುಗಳ ಸದಸ್ಯರಾಗಬಹುದು. ಹೈನುಗಾರಿಕೆ, ಬೇಸಾಯ, ಸಣ್ಣ ವ್ಯಾಪಾರ, ತೋಟಗಾರಿಕಾ ಬೆಳೆಗಳ ಉತ್ಪಾದನೆ, ಕರಕುಶಲ ಕೆಲಸ, ಉಡುಪುಗಳ ತಯಾರಿಕೆ ಮುಂತಾದವುಗಳಲ್ಲಿ ತೊಡಗಿರುವ ಜನರು ಈ ಗುಂಪುಗಳನ್ನು ರಚಿಸಿಕೊಂಡು ಪ್ರಯೋಜನಗಳನ್ನು ಪಡೆಯಬಹುದಾಗಿರುತ್ತದೆ.

ಸಹಕಾರಿ ಬ್ಯಾಂಕುಗಳು, ವಾಣಿಜ್ಯ ಬ್ಯಾಂಕುಗಳು ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು ಈ ಗುಂಪುಗಳ ರಚನೆಗೆ ಪ್ರೋತ್ಸಾಹ ನೀಡುತ್ತಿವೆ ಮತ್ತು ಅವುಗಳಿಗೆ ಸಾಲ ಸೌಲಭ್ಯಗಳನ್ನು ಒದಗಿಸುತ್ತಿವೆ.

ಜಂಟಿ ಬಾಧ್ಯತಾ ಗುಂಪು ಸ್ವಸಹಾಯ ಗುಂಪಿಗಿಂತ ಸ್ವಲ್ಪ ಭಿನ್ನವಾಗಿರುತ್ತದೆ. ಸ್ವಸಹಾಯ ಗುಂಪಿನಲ್ಲಿ ಉಳಿತಾಯವೇ ಪ್ರಧಾನವಾಗಿರುತ್ತದೆ ಹಾಗೂ ಪ್ರಾರಂಭಬಿಂದುವಾಗಿರುತ್ತದೆ. ಆದರೆ ಜಂಟಿ ಬಾಧ್ಯತಾ ಗುಂಪುಗಳಲ್ಲಿ ಉಳಿತಾಯಗಳನ್ನು ಪ್ರಾರಂಭಿಸಬೇಕೆನ್ನುವ ಷರತ್ತು ಇರುವುದಿಲ್ಲ. ಗುಂಪನ್ನು ರಚಿಸಿಕೊಂಡ ನಾಲ್ಕೈದು ತಿಂಗಳುಗಳಲ್ಲಿ ಅದಕ್ಕೆ ಸಾಲವನ್ನು ಒದಗಿಸಬಹುದು. ಜಂಟಿ ಬಾಧ್ಯತಾ ಗುಂಪುಗಳನ್ನು ಪುರುಷರೇ ಹೆಚ್ಚಿನ ಸಂಖ್ಯೆಯಲ್ಲಿ ರಚಿಸಿಕೊಳ್ಳುತ್ತಿರುವುದು ಕಂಡುಬರುತ್ತಿದೆ. ಸ್ವಸಹಾಯ ಗುಂಪುಗಳಲ್ಲಿ ಮಹಿಳೆಯರ ಪ್ರಾಬಲ್ಯವಿದೆ.

Scanned by CamScanner

ಸಾಲವನ್ನು ಮರುಪಾವತಿಸಲು ಗುಂಪಿನ ಎಲ್ಲಾ ಸದಸ್ಯರು ಬಾಧ್ಯ(ಹೊಣೆಗಾರ)ರಾಗಿರುತ್ತಾರೆ. ಭೂರಹಿತ ಕೆಲಸಗಾರರು, ಅಲ್ಪ ಆದಾಯದ ಕುಶಲಕರ್ಮಿಗಳು ಮುಂತಾದ ವರ್ಗಗಳ ಜನರಿಗೆ ಸೌಲಭ್ಯಗಳನ್ನು ಕಲ್ಪಿಸಿ ಅವರನ್ನು ಮುಖ್ಯವಾಹಿನಿಗೆ ತರಲು ನಬಾರ್ಡ್ ಈ ಯೋಜನೆಗೆ ಪ್ರೋತ್ಸಾಹ ನೀಡಿದೆ. ಇದು ಹಣಕಾಸಿನ ಸೇರ್ಪಡೆಯನ್ನು ಸಹ ಚುರುಕುಗೊಳಿಸಲು ಸಹಾಯಕಾರಿಯಾಗುತ್ತದೆ. 2008 ರಿಂದ ಜಂಟಿ ಬಾಧ್ಯತಾ ಗುಂಪುಗಳ ರಚನೆ ಮತ್ತು ಅಭಿವೃದ್ಧಿಯನ್ನು ಒಂದು ವಿಶೇಷ ಕಾರ್ಯಕ್ರಮವಾಗಿ ಅನುಷ್ಠಾನಗೊಳಿಸಲಾಗುತ್ತಿದೆ.

### 7. ವಿವಿಧೋದ್ದೇಶ ಸೇವಾ ಸಹಕಾರಿ

(Multi Purpose Service Co-operative)

ಸಹಕಾರಿ ಸಂಸ್ಥೆಗಳು ವಿವಿಧೋದ್ದೇಶ ಸಹಕಾರಿ ಸಂಘಗಳಾಗಿ ಬೆಳೆಯಬೇಕೆಂಬುದು ನಬಾರ್ಡ್‌ನ ಗುರಿಯಾಗಿರುತ್ತದೆ. ಪ್ರಮುಖವಾಗಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ಕೃಷಿ ಮತ್ತು ತೋಟಗಾರಿಕಾ ಉತ್ಪನ್ನ ಬೆಳೆಗಾರರ ಮತ್ತು ಮಾರಾಟ ಸಹಕಾರ ಸಂಘಗಳು ಮತ್ತು ಬಳಕೆದಾರರ ಸಹಕಾರ ಸಂಘಗಳು ವಿವಿಧೋದ್ದೇಶ ಸಹಕಾರಿ ಸಂಸ್ಥೆಗಳಾಗಿ ಅಭಿವೃದ್ಧಿ ಹೊಂದಲು ಹೇರಳ ಅವಕಾಶಗಳಿರುತ್ತವೆ.

ಈ ಯೋಜನೆಯಲ್ಲಿ ಸಹಕಾರಿ ಸಂಸ್ಥೆಗಳು ದೊಡ್ಡ ಪ್ರಮಾಣದ ಗ್ರಾಹಕ ಮಳಿಗೆಗಳಂತೆ ಮತ್ತು ಸೂಪರ್ ಮಾರ್ಕೆಟ್‌ಗಳಂತೆ ಕೆಲಸ ನಿರ್ವಹಿಸಬೇಕೆಂಬುದು ನಬಾರ್ಡ್‌ನ ಆಶಯವಾಗಿರುತ್ತದೆ. ಸಂಘವು ಕೃಷಿ ಮತ್ತು ತೋಟಗಾರಿಕಾ ಉತ್ಪನ್ನಗಳ ಸಂಸ್ಕರಣೆ ಮತ್ತು ಮಾರಾಟ, ಗೊಬ್ಬರ ಮಾರಾಟ, ಕೃಷಿ ಉಪಕರಣಗಳ ಮಾರಾಟ, ದಿನ ಬಳಕೆಯ ವಸ್ತುಗಳ ಮಾರಾಟ, ಸಾಲ ಪೂರೈಕೆ ಮೊದಲಾದ ಅನೇಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಮುಖಾಂತರ ಸದಸ್ಯರಿಗೆ ಮತ್ತು ಸಾರ್ವಜನಿಕರಿಗೆ ಸೌಲಭ್ಯಗಳನ್ನು ಒದಗಿಸಲು ಅವಕಾಶವನ್ನು ಮಾಡಿಕೊಳ್ಳಬಹುದು.

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳೂ ಸೇರಿದಂತೆ ಹಲವು ಸಹಕಾರಿ ಸಂಸ್ಥೆಗಳು ತಾವು ನಿರ್ವಹಿಸುವ ವ್ಯವಹಾರದಲ್ಲಿ ಹೆಚ್ಚಿನ ಪ್ರಮಾಣದ ಲಾಭವನ್ನು ಗಳಿಸಲು ಅಶಕ್ತವಾಗಿವೆ. ಸಾಲ ನೀಡಿಕೆ ಮತ್ತು ವಸೂಲಾತಿ, ಪಡಿತರ ಆಹಾರ ವಸ್ತುಗಳ ಮಾರಾಟ, ಗೊಬ್ಬರ ಮಾರಾಟ ಮೊದಲಾದ ಚಟುವಟಿಕೆಗಳು ಅವುಗಳಿಗೆ ಸಾಕಷ್ಟು ಲಾಭವನ್ನು ತಂದುಕೊಡಲಾರವು. ಈ ಹಿನ್ನೆಲೆಯಲ್ಲಿ ಅವು ಹಲವು ಚಟುವಟಿಕೆಗಳನ್ನು ನಿರ್ವಹಿಸುವಿಕೆಯು ಅತ್ಯಾವಶ್ಯಕವಾದುದಾಗಿದೆ.

ಸಹಕಾರ ಸಂಘವು ಸಾಕಷ್ಟು ಲಾಭವನ್ನು ಸಂಪಾದಿಸುವ ಉದ್ದೇಶದಿಂದ ಉದ್ದರಿ ಮತ್ತು ಮಾರಾಟವನ್ನು ಜೋಡಣೆ ಮಾಡುವ (Linking Credit with Marketing) ಕಾರ್ಯಕ್ಕೆ ಹಿರಿದಾದ ಪ್ರಾಶಸ್ತ್ಯವಿರುತ್ತದೆ. ಸದಸ್ಯರ ಉತ್ಪನ್ನಗಳನ್ನು ಸಂಗ್ರಹಿಸಿ ಇಟ್ಟುಕೊಂಡು ಅವರಿಗೆ ಸಾಲವನ್ನು ನೀಡಬೇಕು ಮತ್ತು ಮಾರುಕಟ್ಟೆಯಲ್ಲಿ ಬೆಲೆಯು ಅನುಕೂಲಕರವಾಗಿರುವಾಗ ಅದನ್ನು ಮಾರಾಟ ಮಾಡಬೇಕು. ಇದಕ್ಕಾಗಿ ಸಂಘಕ್ಕೆ ಹಣಕಾಸಿನ ಆವಶ್ಯಕತೆ ಇರುತ್ತದೆ ಮತ್ತು ದಾಸ್ತಾನು ಮಳಿಗೆಗಳು ಬೇಕಾಗುತ್ತವೆ. ಈ ಉದ್ದೇಶಕ್ಕೆ ಆವಶ್ಯಕವಿರುವ ಹಣಕಾಸನ್ನು ನಬಾರ್ಡ್ ಪೂರೈಸುತ್ತದೆ.

ಈ ಯೋಜನೆಯಲ್ಲಿ ನಬಾರ್ಡ್ ಬಹುಮುಖ್ಯವಾಗಿ ಕೆಳಗೆ ನಮೂದಿಸಿರುವ ಉದ್ದೇಶಗಳಿಗೆ ಹಣಕಾಸನ್ನು ಒದಗಿಸುತ್ತದೆ.

i) ಮೂಲ ಸೌಲಭ್ಯಗಳಿಗೆ ಬೆಂಬಲ,

ii) ಸಂಘದ ಅಭಿವೃದ್ಧಿ,

iii) ದಾಸ್ತಾನು ಮಳಿಗೆ ನಿರ್ಮಾಣ, ಮತ್ತು

iv) ಕೊಳ್ಳಾಟ ಸಂಕೀರ್ಣ (Shopping Complex)ಗಳ ನಿರ್ಮಾಣ, ಮತ್ತು ಕಛೇರಿ ಕಟ್ಟಡ ನಿರ್ಮಾಣ.

### 8. ರೈತರ ಉತ್ಪನ್ನ ಸಂಘ

(Farmers' Produce Organisation)

ವ್ಯವಸಾಯೋತ್ಪನ್ನಗಳಿಗೆ ಮೌಲ್ಯವರ್ಧನೆಯು (Value Addition) ಪ್ರಾಮುಖ್ಯವಾದುದು. ಅದು ವಸ್ತುವನ್ನು ಸಾರ್ವಜನಿಕ ಉಪಯೋಗಿಯಾಗಿ ಮಾಡುವುದಲ್ಲದೆ ಉತ್ಪಾದಕರಿಗೆ ಉತ್ತಮ ಬೆಲೆಯನ್ನು ದೊರಕಿಸಿಕೊಡಲು ಸಫಲವಾಗುತ್ತದೆ. ಆಹಾರ ವಸ್ತುಗಳು, ತೋಟಗಾರಿಕಾ ಉತ್ಪನ್ನಗಳು, ಹಣ್ಣುಗಳು ಮೊದಲಾದುವುಗಳನ್ನು ಸಂಸ್ಕರಿಸಿ, ಗುಣದರ್ಜೆ ವಿಂಗಡಣೆ ಮಾಡಿ, ಪಿಂಡಿ ಕಟ್ಟುವಿಕೆಯು ಮೌಲ್ಯವರ್ಧನೆ ಪ್ರಕ್ರಿಯೆಯಲ್ಲಿ ಅತಿ ಮುಖ್ಯ ಕೆಲಸಗಳಾಗಿರುತ್ತವೆ.

ವ್ಯವಸಾಯೋತ್ಪನ್ನಗಳ ಮತ್ತು ತೋಟಗಾರಿಕಾ ಉತ್ಪನ್ನಗಳ ಮೌಲ್ಯವರ್ಧನೆಗಾಗಿ ಗುಂಪುಗಳಾಗಿ ಸಮ್ಮಿಳನಗೊಂಡು ಸಂಘಗಳನ್ನು ಸ್ಥಾಪಿಸಿಕೊಳ್ಳಲು ಅವಕಾಶ ಮಾಡಿಕೊಡಲಾಗಿರುತ್ತದೆ. ರೈತರು 250, 500, 1,000 ಮೊದಲಾದ ಸಂಖ್ಯೆಯಲ್ಲಿ ಸೇರಿ ಸಂಘವನ್ನು ಸ್ಥಾಪಿಸಿಕೊಳ್ಳಬಹುದು. ಈ ಸಂಘವನ್ನು ಕಂಪನಿಗಳ ಕಾಯಿದೆ, ಸಂಘಗಳ ಕಾಯಿದೆ ಮುಂತಾದುವುಗಳ ಆಶ್ರಯದಲ್ಲಿ ನೋಂದಾಯಿಸಿಕೊಳ್ಳಬಹುದು. ಈ ಸಂಘಗಳು ತಮ್ಮದೇ ಆದ ವ್ಯವಹಾರ ಯೋಜನೆಗಳನ್ನು (Business Plans) ಅಳವಡಿಸಿಕೊಳ್ಳಬಹುದು.

Scanned by CamScanner

ಈ ಸಂಘಗಳ ಸ್ಥಾಪನೆ ಮತ್ತು ಅಭಿವೃದ್ಧಿ ಕಾರ್ಯದಲ್ಲಿ ಸ್ವಯಂಸೇವಾ ಸಂಸ್ಥೆಗಳು, ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕುಗಳು, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಮೊದಲಾದ ಸಂಸ್ಥೆಗಳನ್ನು ಸೇರಿಸಿಕೊಳ್ಳಲಾಗಿರುತ್ತದೆ.

ಈ ಸಂಘಗಳು ಸ್ಥಾಪನೆ ಮತ್ತು ಅಭಿವೃದ್ಧಿಗಾಗಿ ನಬಾರ್ಡ್ ಸಾಲವನ್ನು ಒದಗಿಸುವುದು ಮಾತ್ರವಲ್ಲದೆ ಪ್ರತಿ ಸಂಘಕ್ಕೆ ಮೊದಲ ಮೂರು ವರ್ಷಗಳ ಅವಧಿಗೆ ಐದು ಲಕ್ಷ ರೂಪಾಯಿಗಳ ಅನುದಾನವನ್ನು ಒದಗಿಸುತ್ತದೆ. ಈ ಅನುದಾನವನ್ನು ಸಂಘಗಳು ಮುಖ್ಯ ಕಾರ್ಯನಿರ್ವಾಹಕರ ವೇತನ ಪಾವತಿ, ಕಛೇರಿ ನಿರ್ವಹಣೆ, ವಿದ್ಯುತ್ ಶುಲ್ಕ ಪಾವತಿ, ಅಂಚೆ ಖರ್ಚು ಮೊದಲಾದವುಗಳಿಗೆ ಉಪಯೋಗಿಸಿಕೊಳ್ಳಲು ಅವಕಾಶವಿರುತ್ತದೆ.

ದೆಹಲಿಯಲ್ಲಿರುವ ಸಣ್ಣ ರೈತರ ಕೃಷಿ ವ್ಯವಹಾರ ಒಕ್ಕೂಟವು (Small Farmers' Agri Business Consortium) ಈ ಸಂಘಗಳಿಗೆ ಸಮಜೋಡಿಯ ಅನುದಾನ (Matching Grant) ನೀಡುತ್ತದೆ.

2016ರೊಳಗಾಗಿ ದೇಶದಲ್ಲಿ ಕನಿಷ್ಠ 2000 ರೈತರ ಉತ್ಪನ್ನ ಸಂಘಗಳನ್ನು ಸ್ಥಾಪಿಸುವ ಗುರಿ ಹೊಂದಲಾಗಿತ್ತು. ಕರ್ನಾಟಕದಲ್ಲಿ 2014-15ನೇ ಸಾಲಿನಲ್ಲಿ ಕನಿಷ್ಠ 75 ಸಂಘಗಳ ಸ್ಥಾಪನೆಯ ಗುರಿಯನ್ನು ಇಟ್ಟುಕೊಳ್ಳಲಾಗಿತ್ತು. ಈ ಗುರಿಗಳು ಬಹುತೇಕ ಸಾಧನೆಯಾಗಿರುತ್ತದೆ.

### 9. ಬೇಸಾಯ ವಲಯ ಅಭಿವೃದ್ಧಿ ನಿಧಿ

(Farm Sector Promotion Fund)

ಮೊದಲು ಅಸ್ತಿತ್ವದಲ್ಲಿದ್ದ **'ಬೇಸಾಯ ವಲಯ ನವ ಪ್ರವರ್ತನೆ ಅಭಿವೃದ್ಧಿ ನಿಧಿ'** (Farm Sector Innovation Promotion Fund) ಮತ್ತು **'ಬೇಸಾಯ ತಂತ್ರಜ್ಞಾನ ವರ್ಗಾವಣೆ ನಿಧಿ'** (Farm Technology Transfer Fund) ಯನ್ನು ಒಟ್ಟುಗೂಡಿಸಿ ಬೇಸಾಯ ವಲಯ ಅಭಿವೃದ್ಧಿ ನಿಧಿಯನ್ನು ಸ್ಥಾಪಿಸಲಾಗಿರುತ್ತದೆ.

ಉದ್ದೇಶಗಳು

1. ನವಪ್ರವರ್ತನೆಗಳನ್ನು ಅಭಿವೃದ್ಧಿಪಡಿಸುವುದು ಮತ್ತು ಆ ವಲಯಕ್ಕೆ ಆವಶ್ಯಕವಿರುವ ತಂತ್ರಜ್ಞಾನವನ್ನು ವರ್ಗಾಯಿಸುವುದು ಈ ನಿಧಿಯ ಪ್ರಮುಖ ಉದ್ದೇಶವಾಗಿರುತ್ತದೆ.
2. ಕೃಷಿಯಲ್ಲಿ ಸುಸ್ಥಿರ ಮತ್ತು ವೈಜ್ಞಾನಿಕ ವಿಧಾನಗಳನ್ನು ಅಭಿವೃದ್ಧಿಪಡಿಸುವುದು.
3. ಕೃಷಿಕರ ಆದಾಯ ಮಟ್ಟಗಳನ್ನು ಎತ್ತರಿಸುವುದು.

ಈ ನಿಧಿಯಿಂದ ಬ್ಯಾಂಕುಗಳಿಗೆ ಮತ್ತು ಸಹಕಾರಿ ಸಂಸ್ಥೆಗಳಿಗೆ ನಬಾರ್ಡ್ ಸಾಲವನ್ನು ಒದಗಿಸುತ್ತದೆ. ಈ ಸಂಸ್ಥೆಗಳು ವಿನೂತನ ರೀತಿಗಳ ಆರ್ಥಿಕ ಚಟುವಟಿಕೆಗಳಿಗೆ ಸಾಲವನ್ನು ಪೂರೈಸಲು ನಿಧಿಯಿಂದ ಹಣಕಾಸನ್ನು ದೊರಕಿಸಿಕೊಡಲಾಗುತ್ತದೆ. ಹೊಸ ರೀತಿಯ ಆರ್ಥಿಕ ಚಟುವಟಿಕೆಗಳು ಎಂದರೆ ಸಾಮಾನ್ಯವಾಗಿ ಕುರಿ ಮತ್ತು ಮೇಕೆ ಸಾಕಣೆ, ಪಶುಪಾಲನೆ, ತೋಟಗಾರಿಕಾ ಬೇಸಾಯ, ಜೇನು ಕೃಷಿ, ಪುಷ್ಪ ಕೃಷಿ, ಇತ್ಯಾದಿ.

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ಸಹಕಾರಿ ಬ್ಯಾಂಕುಗಳು, ಕೃಷಿ ವಿಜ್ಞಾನ ಕೇಂದ್ರಗಳು ಮೊದಲಾದ ಸಂಸ್ಥೆಗಳ ನೆರವನ್ನು ಈ ಯೋಜನೆಯ ಯಶಸ್ವಿಗಾಗಿ ಪಡೆಯಲಾಗುತ್ತಿದೆ.

### 10. ದೀರ್ಘಾವಧಿ ನೀರಾವರಿ ನಿಧಿ

(Long term Irrigation Fund) :

ನಬಾರ್ಡ್ ದೀರ್ಘಾವಧಿ ನೀರಾವರಿ ನಿಧಿಯನ್ನು ಸೃಷ್ಟಿಸಿರುತ್ತದೆ. ಈ ನಿಧಿಗೆ ಅದು ಅಪಾರ ಪ್ರಾಶಸ್ತ್ಯವನ್ನು ನೀಡಿರುತ್ತದೆ. 2016-17 ಸಾಲಿನಲ್ಲಿ ನೀರಾವರಿ ಯೋಜನೆಗಳಿಗೆ ಹಣಕಾಸನ್ನು ಒದಗಿಸಲು 25,000 ಕೋಟಿ ರೂಪಾಯಿಗಳನ್ನು ನಿಗದಿಪಡಿಸಲಾಗಿರುತ್ತದೆ. ಈ ವರ್ಷ ಕಿರು ನೀರಾವರಿ ಯೋಜನೆಗಳಿಗೆ ಹೆಚ್ಚಿನ ಆದ್ಯತೆ ನೀಡಲು ಉದ್ದೇಶಿಸಲಾಗಿರುತ್ತದೆ. ಇದಕ್ಕಾಗಿ 2,000 ಕೋಟಿ ರೂಪಾಯಿಗಳನ್ನು ಮೀಸಲಿಡಲಾಗಿರುತ್ತದೆ.

Scanned by CamScanner